ನೀವು ಬಂದದ್ದು ಒಳ್ಳೆಯದಾಯಿತು. ಬೇಕಾದ ಸಾಮಗ್ರಿಯನ್ನು ಆಮೇಲೆ ತನ್ನಿ' ಎಂದು ಸ್ವಲ್ಪ ಹೊತ್ತು ವಿರಮಿಸಲು ಹೇಳಿದಳು.

ಸುಸ್ತಾಗಿದ್ದ ಮಲ್ಲಿಕಾರ್ಜುನನು, ಚೆನ್ನಮ್ಮನ ಗಮನಿಸದೆ ಹಾಗೆಯೇ ಉರುಳಿಕೊಂಡನು. ಬಂಡೆಗಲ್ಲುಗಳ ಮೇಲೆ ಮಲಗಲು ತ್ರಾಸವಾಗಬಹುದೇನೋ ಎಂದು ಯೋಚಿಸಿದ ಶರಣ, ತುರುಗಾಹಿ ರಾಮಣ್ಣನು ಹೆಣೆದಿದ್ದ ಗರಿಗಳನ್ನು ತಂದು, ಹಾಸಿಗೆಯಂತೆ ಮಾಡಿ, ಚೆನ್ನಮ್ಮನಿಗೆ ಮಲಗಲು ತಿಳಿಸಿದನು.

ವಿರಮಿಸಿದ ನಂತರ, ನೀಲಾಂಬಿಕೆಯ ಮಾತುಗಳು ಇವರಿಗೆ ನೆನಪಾದವು. ಆದರೆ ಪೋಲಿಕೆಯ ಸಾಮಗ್ರಿಯನ್ನು ಎಲ್ಲಿ ತರುವುದು? ಯಾರು ನೀಡುತ್ತಾರೆ? ಎಂದು ಮಲ್ಲಿಕಾರ್ಜುನನು ಯೋಚಿಸಿ 'ಶರಣು, ನೀನೇ ಏನಾರ ಮಾಡೋ' ಎಂದು ಅಡ್ಡ ಮಲಗಿದನು. ನಂಬಿದ ಮನೆ ದೇವರಿಗೆ ನೈವೇದ್ಯವನ್ನು ಮಾಡಿಕೊಡದಷ್ಟು ಸೋಮಾರಿಯಾದನಲ್ಲ ತನ್ನ ಗಂಡ ಎಂದು ಮೂದಲಿಸಿ, ಚೆನ್ನಮ್ಮ ಶರಣಪ್ಪನ ಹಿಂದೆ ನಡೆದಳು.

ಶರಣಪ್ಪನು ಕಲ್ಯಾಣದ ಇತರ ಶರಣರೊಡನೆ ಕೂಡಿ ಅಕ್ಕಿ, ಬೇಳೆ, ಬೆಲ್ಲ ಹಾಗೂ ಕಬ್ಬನ್ನು ಹೊಂದಿಸಿದನು. ಒನಕೆಯಿಂದ ಅಕ್ಕಿಯನ್ನು ಕುಟ್ಟಿ ಪುಡಿ ಮಾಡಲು, ಚೆನ್ನಮ್ಮಳು ಅದನ್ನು ಬೀಸುವ ಕಲ್ಲಿನಲ್ಲಿ ಹಿಟ್ಟು ಮಾಡಿದಳು. ಹಸಿ ಹಿಟ್ಟನ್ನು ನಾದಲಾದರೂ ಸಹಾಯ ಮಾಡುತ್ತಾನೆಂದುಕೊಂಡರೆ, ಮಲ್ಲಿಕಾರ್ಜುನ, ಬಸವಣ್ಣನವರ ಕಾಲಿಡಿದು, ಎಲೆಕ್ಷನ್ ಹೇಗೆ ಗೆಲ್ಲುವುದು ಎಂದು ಯೋಚಿಸುತ್ತಿದ್ದನು.

ಅಕ್ಕಿಹಿಟ್ಟಿಗೆ ಬೆಲ್ಲ ಸೇರಿಸಿ, ಒಂದಷ್ಟು ಕಬ್ಬಿನ ರಸವನ್ನು ಸಿಹಿಗೆಂದು ಬೆರೆಸಿದ ಚೆನ್ನಮ್ಮ, ಪೋಲಿಕೆಗಳನ್ನು ತಟ್ಟುತ್ತಾ ಶರಣಪ್ಪನಿಗೆ ನೀಡುತ್ತಿದ್ದಳು. ಅವನು ಕಲ್ಲುಗಳ ನಡುವೆ ಕಟ್ಟಿಗೆಗಳಿಗೆ ಬೆಂಕಿ ತಗುಲಿಸಿ, ಪೋಲಿಕೆಯನ್ನು ಹದವಾಗಿ ಬೇಯಿಸಿದನು. ಮಹಾಮನೆಯ ಅಂಗಳದಲ್ಲಿ ಶರಣರು ದೊಡ್ಡವರ ಹಾದಿಯನ್ನು ಕಾಯುತ್ತಿದ್ದರು. ಕಲ್ಲಿನ ಕೋಳಿಯು ಕೂಗುವಲ್ಲಿ, ನಾಲಿಗೆಯಿಲ್ಲದ ಗಂಟೆ ಶಬ್ದ ಮಾಡುವಲ್ಲಿ, ಕುಡುವಿಲ್ಲದ ನಗಾರಿ ನುಡಿಯುವಲ್ಲಿ, ದೇಹದಲ್ಲಿ ಆರುಖಂಡುಗ ಕಜ್ಜಿಯಿಂದ ಕೀವು ಸುರಿಸುತ್ತಿದ್ದ ದೊಡ್ಡವರು ಗುಹೆಯ ದ್ವಾರದಲ್ಲಿ ಬಂದು ನಿಂತರು.

ಕಜ್ಜಿ ತುಂಬಿದ ಇವನು ದೊಡ್ಡವನೇ ಎಂದು ಚೆನ್ನಮ್ಮ ಯೋಚಿಸುವಾಗ ಬಸವಣ್ಣನವರು ನೇರವಾಗಿ ಬಂದು 'ಮಂಟೇದ, ಏನು ನಿನ್ನ ವೇಷ?' ಎಂದು ನಗುತ್ತಾ ಕೇಳಿದರು. 'ನನ್ನ ದೇಹ ಜನರ ಅಂತರಂಗದ ಪ್ರತೀಕ, ಅದು ಶುದ್ಧವಾದರೆ ಬಹಿರಂಗವು ಸುಂದರ, ಇದು ನಿಮ್ಮ ನಂಬಿಕೆಯಲ್ಲವೇ ಅಣ್ಣಾ...' ಎಂದು ಹೇಳಿ ಮಂಟೇಸ್ವಾಮಿಯು ನಗುವಲ್ಲಿ, ಬಸವಣ್ಣ ಹಾಗೂ ಇತರ ಶರಣರು, ಆತನಿಗೆ ಇಷ್ಟವಾದ ಪೋಲಿಕೆಯನ್ನು ಮಾಡಲಾಗಿದ್ದು, ಅದನ್ನು ಸವಿದು ನಂತರ ದಕ್ಷಿಣದೆಡೆಗೆ ಪಾದ ಬೆಳೆಸುವಂತೆ ಹೇಳಿದರು. ಶರಣರೆಲ್ಲರೂ ಪೋಲಿಕೆಯನ್ನು ಸವಿಯುತ್ತಿರುವಾಗ, ತಾನು ನಿತ್ಯ ಪೂಜಿಸುವ ದೇವರು ಹೀಗೆ ಎಲ್ಲರೊಡನೆ ಬೆರೆಯುವುದು ಕಂಡು ಚೆನ್ನಮ್ಮ ಮೂಕಳಾದಳು. ಇಲ್ಲಿ ಎಲ್ಲರೂ ಲಿಂಗ ಜಂಗಮರು, ಕ್ಯಾಲೆಂಡರ್‌ನ ಇವರ ಚಿತ್ರಪಟಕ್ಕೂ, ಮಹಾಮನೆಯ ಬಸವಣ್ಣನವರ ನಿರ್ಲಿಪ್ತತೆಗೂ ಸಂಬಂಧವಿಲ್ಲದೇ ಇರುವುದು ಇವಳಿಗೆ ತನ್ನ ಭಕ್ತಿಯ ಬಗ್ಗೆ ಅನುಮಾನ ಬಂದಂತಾಯಿತು.

ಅಣ್ಣನವರ ಕಿರೀಟವಿಲ್ಲದ ಶಿರ, ಆಭರಣವಿಲ್ಲದ ಕೈಗಳು, ತೇಜಸ್ಸಿನಿಂದ ಕೂಡಿದ ಕಣ್ಣುಗಳು, ಮೌನದಲ್ಲಿ ಗರಿಗಳ ಮೇಲೆ ಮೂಡಿಸುತ್ತಿದ್ದ ವಚನಾಕ್ಷರಗಳು, ಕೆಲಸದಲ್ಲಿ ನಿರತರಾಗಿದ್ದ ಕಾಯಕಯೋಗಿಗಳು... ಮಹಾಮನೆಯಲ್ಲಿನ ನಿಜಭಕ್ತಿಯ ಸಹಜ ಲೋಕವೇ ಅವಳ ಕಣ್ಣ ಮುಂದಿತ್ತು.

ಸಮಾರಂಭಗಳಲ್ಲಿ ಹೊರಗೇ ನಿಲ್ಲುತ್ತಿದ್ದ ಶರಣಪ್ಪನು ಕಲ್ಯಾಣದ ಶರಣರೊಡನೆ ಎಲ್ಲಾ ಕಾಯಕದಲ್ಲಿ ಭಾಗಿಯಾಗಿದ್ದ. ದೊಡ್ಡವರು ಹೊರಡುವಲ್ಲಿ ಬಸವಣ್ಣನವರು ಮುತ್ತುಗದ ಎಲೆಯಲ್ಲಿ ಪೋಲಿಕೆಯೊಂದನ್ನು ಶರಣಪ್ಪನಿಗೆ ನೀಡಿ ಮುಂದೆ ನಡೆದರು.

ದೂರದಲ್ಲಿ ಕೈಮುಗಿದುಕೊಂಡೇ ನಿಂತಿದ್ದ ಗಂಡ–ಹೆಂಡತಿಯರನ್ನು ಕಂಡು ಪ್ರೀತಿಯಿಂದ ತನ್ನ ಕೈಯನ್ನು ಚಾಚಿ ಶರಣಪ್ಪ, 'ಅಕ್ಕಾ, ಊಟ...' ಎನ್ನುವಲ್ಲಿ, ಚೆನ್ನಮ್ಮ ಬಂದು, ಪೋಲಿಕೆಯ ಚೂರುಗಳನ್ನು ಬಾಯಿಗೆ ಹಾಕಿಕೊಂಡಳು. ●